## ಕಥೆ

ಕುಮಾರ್ ಸೋಫಾದಲ್ಲಿ ಕುಳಿತುಕೊಳ್ಳುತ್ತಾ ಕೇಳಿದ. 'ಏನಾದರೂ ಆದೀತು. ನನ್ನ ಮಧ್ಯಾಹ್ನದ ಊಟ ತುಂಬಾ ಕಡಿಮೆಯಿರುತ್ತದೆ. ನಮ್ಮ ವೃತ್ತಿಯಲ್ಲಿ ಬೋತ್ ಮೆಂಟಲ್ ಅಂಡ್ ಫಿಸಿಕಲ್ ಪರ್ಸನಾಲಿಟೀಸನ್ನ ಥ್ರೂ ಔಟ್ ಮೇಯ್ನ್‌ಟೇನ್ ಮಾಡಿಕೊಂಡು ಹೋಗಬೇಕು. ಹಿಂದೆಲ್ಲಾ ನಮ್ಮ ವೃತ್ತಿ ಹದಿನೆಂಟರಿಂದ ಮುವತ್ತು ವರ್ಷಗಳ ವಯಸ್ಸಿನ ಅವಧಿಗೆ ಸೀಮಿತವಾಗಿತ್ತು. ಆದರೆ ಈಗ ಅದು ಸಡಿಲಗೊಂಡಿದೆ. ನನ್ನನ್ನೇ ತೆಗೆದುಕೊಳ್ಳಿ, ನನಗೀಗ ಮೂವತ್ತೆಂಟು ನಡೆಯುತ್ತಿದೆ. ನಲವತ್ತೆರಡು ಕಂಪ್ಲೀಟ್ ಆಗುವವರೆಗೂ ನನ್ನನ್ನು ಇರಿಸಿಕೊಳ್ಳಲು ಕಂಪನಿ ಒಪ್ಪಿದೆ. ಅದೂ ಬೆಂಗಳೂರು ಮುಂಬೈ ಮಧ್ಯೆ ದಿನಕ್ಕೆ ಎರಡು ಹಾರಾಟಗಳಷ್ಟೆ. ನನ್ನ ಕಂಪನಿಗೆ ಸದಾ ಋಣಿಯಾಗಿದ್ದೇನೆ ನಾನು' ಅವಳ ಮುಖದಲ್ಲೊಂದಿಷ್ಟು ಭಾವುಕತೆ ಇಣುಕಿತ್ತು. ಅದು ಅವನ ಗಮನಕ್ಕೆ ಬಂದು, 'ಓಹ್, ನೀವಿನ್ನೂ ಮೂವತ್ತರ ಆಸುಪಾಸಿನಲ್ಲಿದ್ದೀರಿ ಎಂದುಕೊಂಡಿದ್ದೆ. ನಿಮ್ಮ ವಿಮಾನಯಾನ ಕಂಪನಿಯಿಂದ ನಿವೃತ್ತಿಯಾದ ನಂತರ ನಮ್ಮ ಕಂಪನಿಯಲ್ಲಿ ನಿಮಗೊಂದು ಉನ್ನತ ಹುದ್ದೆಯನ್ನು ಸಂತೋಷವಾಗಿ ನೀಡುತ್ತೇನೆ, ಕಂಪನಿಯ ಚೇರ್ಮನ್ ಆಗಿ ನನಗೆ ಆ ಪ್ರಿವಿಲೇಜ್ ಇದೆ' ಅವನು ತನ್ನ ಮನದಲ್ಲಿನ ಮಾತನ್ನು ಹೊರಗೆಡವಿದ. 'ನಿಮ್ಮ ಉದಾತ್ತತೆಗೆ ಹೃದಯಪೂರ್ವಕ ಧನ್ಯವಾದಗಳು' ಅವಳ ಮಾತುಗಳೂ ಅಂತರಾಳದಿಂದಲೇ ಹೊರ ಬಿದ್ದಿದ್ದವು.

ಶುಭ್ರವಾದ ಬಿಳಿಬಟ್ಟೆಗಳನ್ನು ತೊಟ್ಟು, ಕೈಗಳಿಗೆ ಹೈಜಿನಿಕ್ ಗ್ಲೌಸ್ ತೊಟ್ಟ ವ್ಯಕ್ತಿಯೊಬ್ಬ ಎರಡು ಪ್ಲೇಟುಗಳನ್ನು ಇಟ್ಟು, ನಾಲ್ಕು ಕಂಟೈನರ್‌ಗಳ ಹಾಟ್ ಕ್ಯಾರಿಯರ್ ಬಾಕ್ಸನ್ನು ಮುಂದಿಟ್ಟಿದ್ದ. 'ನಾನು ಮುಂಬಯಿಯಲ್ಲಿ ಮಧ್ಯಾಹ್ನ ಊಟ ಮಾಡುವುದು ಅಪರೂಪ. ನಮ್ಮ ಕಂಪನಿಯ ಕಿಚನ್ ಕೂಡಾ ತುಂಬಾ ಹೈಜಿನಿಕ್ ಆಗಿದೆ. ಯಾರಾದರೂ ತುಂಬಾ ಬೇಕಾದವರು ಊಟದ ಟೈಮಿಗೆ ಬಂದಾಗ ಮಾತ್ರ ಕಂಪನಿ ಕೊಡಲು ಊಟಕ್ಕೆ ಕೂರುತ್ತೇನೆ. ನೀವು ಊಟಕ್ಕೆ ಇರುತ್ತೀರೆಂದು ಮಹೇಶ್ ಲಂಚ್ ಹೋಂನಿಂದ ಊಟ ತರಿಸಿದ್ದೇನೆ. ನನಗೆ ತಿಳಿದಂತೆ ಜಗತ್ತಿನ ಯಾವ ಹೋಟೆಲಿನಲ್ಲೂ ಮಹೇಶ್ ಲಂಚ್ ಹೋಂನಲ್ಲಿ ಸಿಗುವಂಥ ತಾಜಾ ಹಾಗೂ ರುಚಿಯಾದ ಫಿಶ್ ಐಟಂಗಳು ಸಿಗಲಾರವು' ಎಂದು ಹಾಟ್ ಬಾಕ್ಸನ್ನು ಬಿಚ್ಚಿದ. ತಾನೊಂದು ಚಪಾತಿ ಮತ್ತು ಕಾಣೆ ತವ್ವಾ ಫ್ರೈ ಹಾಕಿಕೊಂಡ. ಅವಳಿಗೆ ಅಂಜಲ್, ಕಾಣೆ ಫ್ರೈ ಜೊತೆಗೆ ಫಿಶ್ ಕರಿ, ಚಪಾತಿ ಬಡಿಸಿ, ಹೊಗೆಯಾಡುತ್ತಿದ್ದ ಅನ್ನದ ಬಾಕ್ಸನ್ನು ಮುಂದಿಟ್ಟ. ಅವಳು ಅಪರೂಪಕ್ಕೆ ತೃಪ್ತಿಯಾಗಿಯೇ ಊಟ ಮಾಡಿದಳು. ಅವನು ಮಾತ್ರ ಒಂದು ಚಪಾತಿ ಮತ್ತು ಒಂದು ಫಿಶ್ ಫ್ರೈನಲ್ಲೇ ಊಟ ಮುಗಿಸಿದ.

'ಮನುಷ್ಯನಿಂದ ಹಿಡಿದು ಜೀವಜಗತ್ತಿನ ಯಾವುದೇ ಪ್ರಾಣಿಯ ದೇಹಕ್ಕೆ ಕರುಳು ಇಂಜಿನ್ ಇದ್ದಂತೆ. ದೇಹವೆಂಬ ಜೀವಂತ ಯಂತ್ರದ ಕಾರ್ಯ ಚಟುವಟಿಕೆಗೆ ಬೇಕಾಗುವ ಶಕ್ತಿಯನ್ನು ಉತ್ಪಾದಿಸುವುದೇ ಕರುಳೆಂಬ ಇಂಜಿನ್ನು. ಇಂಥ ಇಂಜಿನ್ನಿಗೆ ಆಹಾರವೇ ಇಂಧನ. ಹಾಗಾಗಿಯೇ ಕರುಳನ್ನು ಯಾವೊತ್ತೂ ನೋಯಿಸಬಾರದು ಎನ್ನುವ ಮಾತಿದೆ. ಹಾಗೆಂದು ಈ ಯಂತ್ರಕ್ಕೆ ಅದೂ ಮನುಷ್ಯನ ಕರುಳಿಗೆ ಸಿಕ್ಕಿದ್ದನ್ನೆಲ್ಲಾ ಸಿಕ್ಕಾಪಟ್ಟೆ ತುರುಕಬಾರದು. ನಿಮ್ಮ ಕಂಪನಿ ಮನುಷ್ಯನ ದೇಹ ಮತ್ತು ಮನಸ್ಸಿನ ಆರೋಗ್ಯವನ್ನು ಕಾಪಾಡಲು ಮತ್ತು ಸುಧಾರಿಸಲು ಅಗತ್ಯವಾದ ಔಷಧಿ ಮತ್ತು ವೈದ್ಯಕೀಯ ಸಲಕರಣೆಗಳನ್ನು ಉತ್ಪಾದಿಸುವ ಕೆಲಸದಲ್ಲಿ ತೊಡಗಿದ್ದು ನೀವು ಯೋಗ್ಯ ವ್ಯಾಪಾರದ ಒಳ್ಳೆಯ ಕೆಲಸದಲ್ಲಿ ತೊಡಗಿರುವಿರಿ...' ಅವಳ ಮೆಚ್ಚುಗೆಯ ಮಾತುಗಳನ್ನು ತುಂಡರಿಸಿ ಸಿದ್ಧಾರ್ಥ ಕುಮಾರ್ 'ಕೋವಿಡ್ ಸಮಯದಲ್ಲಿ ನಮ್ಮ ಕಂಪನಿ ಐನೂರು ಕೋಟಿಗಳಿಗಿಂತಲೂ ಹೆಚ್ಚು ಮೌಲ್ಯದ ಔಷಧಿ ಮತ್ತು ಅದಕ್ಕೆ ಸಂಬಂಧಿಸಿದ ಉಪಕರಣಗಳನ್ನು ಉಚಿತವಾಗಿ ಸರಕಾರದ ಮತ್ತು ಎನ್‌ಜಿಒ ಸಂಸ್ಥೆಗಳ ಮೂಲಕ ದೇಶದ ಸಾಮಾನ್ಯ ಜನರಿಗೆ ಪೂರೈಕೆ ಮಾಡಿತ್ತು' ಎಂದ. ಅವನ ಮಾತುಗಳಲ್ಲಿ ಅಹಂನ ಒಂದು ಚೂರು ಛಾಯೆಯೂ ಅವಳ ಗಮನಕ್ಕೆ ಬಂದಿರಲಿಲ್ಲ. ಮೆಚ್ಚುಗೆಯಿಂದ 'ರಿಯಲಿ ನೋಬೆಲ್ ಜಾಬ್. ಇರುವವರು ಇಲ್ಲದವರಿಗೆ ಕೊಡುವುದು ಕೂಡಾ ಒಂದು ಧರ್ಮ. ಇಂಥ ಒಳ್ಳೆಯ ಕೆಲಸ ಮಾಡುವ ನೀವೂ ಗಟ್ಟಿಯಾಗಿರಬೇಕಲ್ಲ, ಹಾಗಾಗಿ ನಿಮ್ಮ ಕರುಳನ್ನೂ ಜೋಪಾನವಾಗಿ ಇಟ್ಟುಕೊಳ್ಳುವುದು ಸಹ ಧರ್ಮ ಅಲ್ಲವೇ' ಇವು ಅವನು ಕಡಿಮೆ ಊಟ ಮಾಡಿದ್ದರ ಕುರಿತು ಹೇಳಿದ ಮಾತುಗಳಾಗಿದ್ದವು.